# ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ ಸಂಘಗಳ
# ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

E-mail ID: deo.kolar07@gmail.com (ಚುನಾವಣೆ ಶಾಖೆ) ದೂರವಾಣಿ ಸಂಖ್ಯೆ: 08152-243507

ನಂ.ಜಿಚುಕೋ/ಚುನಾವಣೆ/ಡಿಸಿಸಿಬ್ಯಾಂಕ್/ಸಿಆರ್/14/2023-24 ದಿನಾಂಕ: 12/05/2025

## ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಯ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು, 1960 ರ ನಿಯಮ 13(ಡಿ) ರೀತ್ಯ ಅಂತಿಮ ಮತದಾರರ ಪಟ್ಟಿಗಳ ಪ್ರಕಟಣೆ

********

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಯ ಚುನಾವಣೆಯನ್ನು ದಿನಾಂಕ: 28/05/2025 ರಂದು ನಿರ್ವಹಿಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು, 1960 ರ ನಿಯಮ 14(1) ರಡಿ ಈ ಕಚೇರಿಯ ಆದೇಶ ಸಂಖ್ಯೆ: ಜಿಚುಕೋ/ಚುನಾವಣೆ/ಡಿಸಿಸಿಬ್ಯಾಂಕ್/ಸಿಆರ್/14/2023-24 ದಿನಾಂಕ: 13/03/2025 ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಹಿನ್ನಲೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಡಿ.ಸಿ.ಸಿ. ಬ್ಯಾಂಕ್ ನಿ, ಕೋಲಾರ ರವರು ದಿನಾಂಕ: 28/03/2025 ರಂದು ಈ ಕಛೇರಿಗೆ ಮತದಾರರ ಪಟ್ಟಿಯನ್ನು ಸಲ್ಲಿಸಿದ್ದು, ಅವುಗಳನ್ನು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ಕೋಲಾರ ಜಿಲ್ಲೆ, ಕೋಲಾರ ರವರಿಂದ ಪರಿಶೀಲನೆಗೆ ಒಳಪಡಿಸಿ, ದಿನಾಂಕ: 07/04/2025 ರಂದು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು, 1960 ರ ನಿಯಮ 13-ಡಿ ರನ್ವಯ ರಂತೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಯ ಚುನಾವಣೆಗೆ ಸಂಬಂಧಪಟ್ಟಂತೆ ಮತ ನೀಡುವ ಹಕ್ಕುಳ್ಳ ಸದಸ್ಯರ / ಡೆಲಿಗೇಟ್‌ಗಳ ಕರಡು ಪಟ್ಟಿ / ಸುಸ್ಥಿದಾರರ ಕರಡು ಪಟ್ಟಿ / ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗದಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ / ಡೆಲಿಗೇಟ್‌ಗಳ ಕರಡು ಪಟ್ಟಿಯನ್ನು ಮತ್ತು ಅನರ್ಹಗೊಂಡಿರುವ ಸಹಕಾರ ಸಂಘಗಳ ಕರಡು ಪಟ್ಟಿಯನ್ನು ಒಳಗೊಂಡಂತೆ ಕರಡು ಮತದಾರರ ಪಟ್ಟಿಯನ್ನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿರುತ್ತದೆ. ಹಾಗೂ ದಿನಾಂಕ : 05/05/2025 ರವರೆಗೆ ಸ್ವೀಕೃತವಾದ ದೂರು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರು ಪತ್ರ ನಂ.ಸಚುಪ್ರಾ/ಬೆಂ.ಪ್ರಾ/ಫೆಡರಲ್/ಆಮಂಚು/ರಿಟ್‌ಅರ್ಜಿಆದೇಶ/195/2024-25 ದಿನಾಂಕ : 12/05/2025 ರ ಮೇರೆಗೆ ಜಂಟಿ ನಿಬಂಧಕರು, ಬೆಂಗಳೂರು ರವರ ಆದೇಶ ನಂ.ಜಿಆರ್‌ಬಿ/ತಿದ್ದುಪಡಿ-2/12(6)/2024-25 ದಿನಾಂಕ : 09/05/2025 ರ ಮೇರೆಗೆ ದಿನಾಂಕ : 02/05/2025 ರ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನಗಳಂತೆ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಕೋಲಾರ ಇದರ ಉಪವಿಧಿ ಸಂಖ್ಯೆ 9(ಎ) ರ ತಿದ್ದುಪಡಿಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 12(6) ರ ಅವಕಾಶಗಳನ್ವಯ ಸ್ವಯಂ ತಿದ್ದುಪಡಿ ಮಾಡಿ ಅನುಮೋದಿಸಿ ನೋಂದಣಿ ಮಾಡಿ ದಿನಾಂಕ : 09/05/2025 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಿರುವ ಆದೇಶದ ಪ್ರತಿಯನ್ನು ಕಳುಹಿಸುತ್ತಾ, ಈಗಾಗಲೇ ತಿಳಿಸಿರುವಂತೆ ಕೂಡಲೇ ನ್ಯಾಯಾಲಯದ ಆದೇಶದಂತೆ ಚುನಾವಣೆ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲು ನಿರ್ದೇಶಿಸಿರುತ್ತಾರೆ.

ಅದರಂತೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಡಿ.ಸಿ.ಸಿ. ಬ್ಯಾಂಕ್ ನಿ, ಕೋಲಾರ ರವರು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ರವರ ದಿನಾಂಕ : 09/05/2025 ರ ಆದೇಶ ಮತ್ತು ದಿನಾಂಕ : 12/05/2025 ರ ತಿದ್ದುಪಡಿ ಆದೇಶದಂತೆ ಕರಡು ಮತದಾರರ ಪಟ್ಟಿಗೆ ನಿಯಮಾನುಸಾರ ಸೂಕ್ತ ತಿದ್ದುಪಡಿಯನ್ನು ಕೈಗೊಂಡು ದಿನಾಂಕ: 12/05/2025 ರಂದು ಈ ಕಛೇರಿಗೆ ಅಂತಿಮ ಮತದಾರರ ಪಟ್ಟಿಯನ್ನು ಸಲ್ಲಿಸಿದ್ದು, ಅವುಗಳನ್ನು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ಕೋಲಾರ ಜಿಲ್ಲೆ, ಕೋಲಾರ ರವರಿಂದ ಪರಿಶೀಲನೆಗೆ ಒಳಪಡಿಸಿ, ದಿನಾಂಕ : 12/05/2025 ರಂದು ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಕೋಲಾರದ ಆಡಳಿತ ಮಂಡಳಿಯ ಚುನಾವಣೆಯ ಅಂತಿಮ ಮತದಾರರ ಪಟ್ಟಿಗಳನ್ನು ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ಚುನವಣಾಧಿಕಾರಿ,
ಕೋಲಾರ ಜಿಲ್ಲೆ, ಕೋಲಾರ.

ನಮೂನೆ XII

{ನಿಯಮ 14(3)ಅನ್ನು ನೋಡಿ}

## ಚುನಾವಣಾ ನೋಟೀಸು

**ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ** ಇದರ ಆಡಳಿತ ಮಂಡಲಿ ಒಟ್ಟು 21 ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಚುನಾವಣೆಯ ದಿನಾಂಕದಿಂದ ಮುಂದಿನ 05 (ಐದು) ವರ್ಷಗಳ ಅವಧಿಗೆ **ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೋಲಾರ ಇಲ್ಲಿ ದಿನಾಂಕ 28-05-2025 ರ ಬುಧವಾರ ಬೆಳಗ್ಗೆ 09-00** ಗಂಟೆಯಿಂದ ಸಾಯಂಕಾಲ 4-00 ಗಂಟೆಯವರೆಗೆ ಚುನಾವಣೆಯಲ್ಲಿ ಆಯ್ಕೆ ಮಾಡಬೇಕಾದ ಸ್ಥಾನಗಳು-18, ಈ ಪೈಕಿ **ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 14 ತಾಲ್ಲೂಕುಗಳಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ-14 ನಿರ್ದೇಶಕರು, ಬ್ಯಾಂಕಿನ ಕಾರ್ಯವ್ಯಾಪ್ತಿಗೆ** ಬರುವ ಎರಡೂ ಜಿಲ್ಲೆಯ ಎಲ್ಲಾ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳಿಂದ (ಟಿಎಪಿಸಿಎಂಎಸ್) ಚುನಾಯಿಸಲ್ಪಡುವ-01 ನಿರ್ದೇಶಕರು, ಆಯಾ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ (ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಒಳಗೊಂಡಂತೆ)-02 **ನಿರ್ದೇಶಕರು , ಬ್ಯಾಂಕಿನ ಕಾರ್ಯವ್ಯಾಪ್ತಿಗೆ ಬರುವ ಇನ್ನಿತರೆ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ** -01 ನಿರ್ದೇಶಕರುಗಳ ಸ್ಥಾನಗಳಿಗಾಗಿ ಚುನಾವಣೆ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

**ಸದರಿ ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದು ನೋಟೀಸು ನೀಡಲಾಗಿದೆ.**

| ಕ್ರ.ಸಂ | ಚುನಾವಣಾ ಕಾರ್ಯ ಸೂಚಿ | ದಿನಾಂಕ, ವಾರ, ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 01. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ | ದಿನಾಂಕ: 18-05-2025 ನೇ ಭಾನುವಾರ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆಯವರೆಗೆ | 14(ಎ) | ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ ರವರ ನ್ಯಾಯಾಲಯದ ಸಭಾಂಗಣ, ನಂ. ಜಿ-13, ಜಿಲ್ಲಾ ಆಡಳಿತ ಭವನ, ಟಮಕ, ಕೋಲಾರ ಹಾಗೂ ರಿಟರ್ನಿಂಗ್ ಅಧಿಕಾರಿಯವರ ಕಚೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗೆ ನಮೂನೆ XIII ರಲ್ಲಿ |
| 02. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 20-05-2025 ನೇ ಮಂಗಳವಾರ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆಯವರೆಗೆ | 14(ಎ) | ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ ರವರ ನ್ಯಾಯಾಲಯದ ಸಭಾಂಗಣ, ನಂ. ಜಿ-13, ಜಿಲ್ಲಾ ಆಡಳಿತ ಭವನ, ಟಮಕ, ಕೋಲಾರ ಹಾಗೂ ರಿಟರ್ನಿಂಗ್ ಅಧಿಕಾರಿಯವರ ಕಚೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗೆ ನಮೂನೆ XIII ರಲ್ಲಿ |
| 03. | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ | ದಿನಾಂಕ: 21-05-2025 ನೇ ಬುಧವಾರ ಬೆಳಗ್ಗೆ 11-00 ರಿಂದ | 14(ಬಿ) | ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ ರವರ ನ್ಯಾಯಾಲಯದ ಸಭಾಂಗಣ, ನಂ. ಜಿ-13, ಜಿಲ್ಲಾ ಆಡಳಿತ ಭವನ, ಟಮಕ, ಕೋಲಾರ ಹಾಗೂ ರಿಟರ್ನಿಂಗ್ ಅಧಿಕಾರಿಯವರ ಕಚೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| 04. | ರಿಟರ್ನಿಂಗ್ ಅಧಿಕಾರಿಯಿಂದ ಸಿಂಧುತ್ವ ಹೊಂದಿರುವ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ | ದಿನಾಂಕ: 21-05-2025 ನೇ ಬುಧವಾರ | 14ಬಿ(4) | ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ನಮೂನೆ XIV ರಲ್ಲಿ |

| | | | | |
|---|---|---|---|---|
| ೦೫. | ಉಮೇದುವಾರರಿಂದ ನಾಮಪತ್ರಗಳನ್ನು ಹಿಂತೆಗೆದು ಕೊಳ್ಳಲು ಕೊನೆಯ ದಿನಾಂಕ | ದಿನಾಂಕ: 23-05-2025 ನೇ ಶುಕ್ರವಾರ ಮದ್ಯಾಹ್ನ 3-00 ಗಂಟೆಯೊಳಗೆ | 14(ಸಿ) | ಉಪವಿಭಾಗ, ಕೋಲಾರ ರವರ ನ್ಯಾಯಾಲಯದ ಸಭಾಂಗಣ, ನಂ. ಜಿ-13, ಜಿಲ್ಲಾ ಆಡಳಿತ ಭವನ, ಟಮಕ, ಕೋಲಾರ ಹಾಗೂ ರಿಟರ್ನಿಂಗ್ ಅಧಿಕಾರಿಯವರ ಕಚೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗೆ ನಮೂನೆ XV ರಲ್ಲಿ |
| ೦೬. | ಸಿಂಧುತ್ವ ಹೊಂದಿರುವ ಉಮೇದುವಾರರ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ: 23-05-2025 ನೇ ಶುಕ್ರವಾರ ಮದ್ಯಾಹ್ನ 3-00 ಗಂಟೆಯ ನಂತರ | 14(ಡಿ) | ರಿಟರ್ನಿಂಗ್ ಅಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| ೦೭. | ಅವಶ್ಯಕವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ | ದಿನಾಂಕ: 23-05-2025 ನೇ ಶುಕ್ರವಾರ ಮದ್ಯಾಹ್ನ 3-30 ರ ನಂತರ | 14(ಇ) | ರಿಟರ್ನಿಂಗ್ ಅಧಿಕಾರಿಗಳ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| ೦೮. | ಉಮೇದುವಾರರ ಪಟ್ಟಿಯ ಚಿಹ್ನೆಯೊಂದಿಗೆ ಪ್ರಕಟಣೆ (ಮಾದರಿ ಮತಪತ್ರ) | ದಿನಾಂಕ: 25-05-2025 ನೇ ಭಾನುವಾರ | 14-ಇ 14-ಎಫ್ | ರಿಟರ್ನಿಂಗ್ ಅಧಿಕಾರಿಗಳ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| ೦೯. | ಮತದಾನದ ದಿನಾಂಕ ಮತ್ತು ಸಮಯ | **ದಿನಾಂಕ: 28-05-2025 ನೇ ಬುಧವಾರ ಬೆಳಿಗ್ಗೆ 09-00 ರಿಂದ ಸಾಯಂಕಾಲ 4-00 ಗಂಟೆವರೆಗೆ** | | ಚುನಾವಣೆ ನಡೆಯುವ ಸ್ಥಳ: **ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ** |
| 10. | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿನಾಂಕ: 28-05-2025 ನೇ ಬುಧವಾರ ಮತದಾನ ಮುಗಿದ ನಂತರ | | ಚುನಾವಣಾ ಮತ ಎಣಿಕೆ ನಡೆಯುವ ಸ್ಥಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ |
| 11. | ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣೆ ಫಲಿತಾಂಶ ಘೋಷಣೆ | ದಿನಾಂಕ: 28-05-2025 ನೇ ಬುಧವಾರ ಮತ ಎಣಿಕೆ ಮುಗಿದ ನಂತರ | | ಚುನಾವಣಾ ಫಲಿತಾಂಶ ಪ್ರಕಟಣೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ |

ದಿನಾಂಕ 12-05-2025.
ಸ್ಥಳ ; ಕೋಲಾರ

(ಡಾ:ಮೈತ್ರಿ ಹೆಚ್.ಪಿ.ಎಸ್)
ರಿಟರ್ನಿಂಗ್ ಅಧಿಕಾರಿ,
*ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ* ಹಾಗೂ ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ.

## <u>ವಿಶೇಷ ಸೂಚನೆಗಳು:</u>

1. ಬ್ಯಾಂಕಿನ ಉಪವಿಧಿ ಪ್ರಕಾರ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಒಟ್ಟು 18 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗಿರುತ್ತದೆ. ಈ ಪೈಕಿ ಈ ಕೆಳಕಂಡಂತೆ ಮತಕ್ಷೇತ್ರವಾರು ಆಡಳಿತ ಮಂಡಳಿ ನಿರ್ದೇಶಕರನ್ನು ಚುನಾಯಿಸಬೇಕಾಗಿರುತ್ತದೆ.

| ಕ್ರ.ಸಂ. | | ಪ್ರತಿನಿಧಿಸುವ ಸಹಕಾರ ಸಂಘದ ವಿವರ | ಸ್ಥಾನಗಳು |
|---|---|---|---|
| 1 | **ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 14 ತಾಲ್ಲೂಕುಗಳಿಂದ 14 ಪ್ರತಿನಿಧಿಗಳು** | | |
| | 1 | ಕೋಲಾರ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |

| | | | |
|---|---|---|---|
| | | ...ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 3 | ಬಂಗಾರಪೇಟೆ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 4 | ಕೆಜಿಎಫ್ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 5 | ಮುಳಬಾಗಿಲು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 6 | ಶ್ರೀನಿವಾಸಪುರ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 7 | ಚಿಂತಾಮಣಿ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 8 | ಶಿಡ್ಲಘಟ್ಟ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 9 | ಚಿಕ್ಕಬಳ್ಳಾಪುರ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 10 | ಗುಡಿಬಂಡೆ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 11 | ಬಾಗೇಪಲ್ಲಿ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 12 | ಗೌರಿಬಿದನೂರು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 13 | ಚೇಳೂರು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| | 14 | ಮಂಚೇನಹಳ್ಳಿ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು (ವ್ಯವಸಾಯ ಸೇವಾ ಸಹಕಾರ ಸಂಘ/ರೈತ ಸೇವಾ ಸಹಕಾರ ಸಂಘ/ಸೇವಾ ಸಹಕಾರ ಸಂಘ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು) | 01 (ಒಬ್ಬ ನಿರ್ದೇಶಕ) |
| 2 | | ಬ್ಯಾಂಕಿನ ಕಾರ್ಯವ್ಯಾಪ್ತಿಗೆ ಬರುವ ಎರಡೂ ಜಿಲ್ಲೆಯ ಎಲ್ಲಾ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳಿಂದ (ಟಿಎಪಿಸಿಎಂಎಸ್) ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |
| 3 | | ಆಯಾ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ಇಬ್ಬರು ನಿರ್ದೇಶಕರು (ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸಹ ಒಳಗೊಂಡಂತೆ) | 02 (ಇಬ್ಬರು ನಿರ್ದೇಶಕರು) |
| 5 | | ಬ್ಯಾಂಕಿನ ಕಾರ್ಯವ್ಯಾಪ್ತಿಗೆ ಬರುವ ಇನ್ನಿತರೆ ಸಹಕಾರ ಸಂಘಗಳಿಂದ ಚುನಾಯಿಸಲ್ಪಡುವ ನಿರ್ದೇಶಕರು | 01 (ಒಬ್ಬ ನಿರ್ದೇಶಕ) |

2. ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು [illegible]
ನಿಯಮಗಳು 1960 ಹಾಗೂ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ರೀತ್ಯಾ ಅರ್ಹತೆಗಳನ್ನು ಹೊಂದಿರತಕ್ಕದ್ದು.

3. ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ಹಾಗೂ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ರೀತ್ಯಾ ಅನರ್ಹತೆಗೆ ಒಳಪಟ್ಟಿರತಕ್ಕದ್ದಲ್ಲ ಅಥವಾ ಹೊಂದಿರತಕ್ಕದ್ದಲ್ಲ.

4. ನಾಮಪತ್ರದ ನಮೂನೆ XIII ನ್ನು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬ್ಯಾಂಕಿನಿಂದ ಪಡೆಯಬಹುದು.

5. ನಾಮಪತ್ರ ಸಲ್ಲಿಸುವುದಕ್ಕೆ ಗೊತ್ತುಪಡಿಸಿದ ದಿನಾಂಕಗಳಂದು ಭರ್ತಿ ಮಾಡಿದ ನಾಮಪತ್ರವನ್ನು ಅಭ್ಯರ್ಥಿಯು ಖುದ್ದಾಗಿ ಸೂಚಕರೊಂದಿಗೆ ರಿಟರ್ನಿಂಗ್ ಅಧಿಕಾರಿಗೆ/ಸಹಾಯಕ ರಿಟರ್ನಿಂಗ್ ಆದಿಕಾರಿಗೆ ಸಲ್ಲಿಸತಕ್ಕದ್ದು. ಅದೇ ಕ್ಷೇತ್ರದ ಮತದಾನದ ಹಕ್ಕುಳ್ಳ ಸಂಘದ ಇನ್ನೊಬ್ಬ ಪ್ರತಿನಿಧಿ ಸದಸ್ಯನು ಸೂಚಕನಾಗಿ ಯುಕ್ತವಾಗಿ ನಾಮಪತ್ರದಲ್ಲಿ ರುಜು ಮಾಡಿರತಕ್ಕದ್ದು.

6. ಯಾವ ಸದಸ್ಯ ಸಹಕಾರ ಸಂಘದ ಪ್ರತಿನಿಧಿಯು ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ಅಭ್ಯರ್ಥಿಯಾಗತಕ್ಕದ್ದಲ್ಲ ಹಾಗೂ ಯಾವ ಸದಸ್ಯ ಸಹಕಾರ ಸಂಘದ ಪ್ರತಿನಿಧಿಯು ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ.

7. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14(ಎ) ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಪ್ರತಿಯೊಬ್ಬ ಅಭ್ಯರ್ಥಿಯು ರೂ.5000.00 (ಐದು ಸಾವಿರ) ಗಳನ್ನು ಚುನಾವಣಾ ಠೇವಣಿಯಾಗಿ ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಸಂಘದ ಹೆಸರಿನಲ್ಲಿ ಪಡೆದ ರಸೀದಿ ಲಗತ್ತಿಸಿ ಸಲ್ಲಿಸತಕ್ಕದ್ದು. ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ, ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಠೇವಣಿಯು ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ 50% ವಿನಾಯಿತಿ ಇರುತ್ತದೆ. ಇದಕ್ಕೆ ಅಭ್ಯರ್ಥಿಯು ಜಾತಿ ಪ್ರಮಾಣಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸಿರತಕ್ಕದ್ದು.

8. 1960 ರ ಸಹಕಾರ ಸಂಘಗಳ ನಿಯಮ 14(ಇ) ಪ್ರಕಾರ ಯಾವುದೇ ಅಭ್ಯರ್ಥಿಯು ರಾಷ್ಟ್ರದಲ್ಲಿ/ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳತಕ್ಕದ್ದು. ಉಮೇದುವಾರರಿಗೆ ಚಿನ್ಹೆಗಳನ್ನು ಹಂಚಿಕೆ ಮಾಡುವ ಅಂತಿಮ ಅಧಿಕಾರವು ರಿಟರ್ನಿಂಗ್ ಅಧಿಕಾರಿಗೆ ಇರುತ್ತದೆ.

9. ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿ ಅಥವಾ ಅವರ ಸೂಚಕ ಪ್ರತಿನಿಧಿ ಹಾಜರಿರಬಹುದು.

10. ಅಭ್ಯರ್ಥಿಯು ನಮೂನೆ XV ರಲ್ಲಿ ಲಿಖಿತದಲ್ಲಿ ನೋಟಿಸ್ ನೀಡುವ ಮೂಲಕ ಮತ್ತು ಅದನ್ನು ನಾಮಪತ್ರ ಸಲ್ಲಿಸಿದ ನಂತರ ಅಂದರೆ ನಾಮಪತ್ರ ಪರಿಶೀಲನೆ ನಂತರದ ದಿನಾಂಕದಲ್ಲಿ ನಿಗದಿ ಮಾಡಿರುವ ದಿನಾಂಕದಂದು ಮೂರು ಗಂಟೆಯೊಳಗಾಗಿ ಅಭ್ಯರ್ಥಿಯೇ ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ನೀಡುವ ಮೂಲಕ ಉಮೇದುವಾರಿಕೆ ಹಿಂತೆಗೆದುಕೊಳ್ಳಬಹುದು. ಒಮ್ಮೆ ನೀಡಿದ ನೋಟೀಸ್‌ನ್ನು ಮಾರ್ಪಡಿಸತಕ್ಕದ್ದಲ್ಲ ಮತ್ತು ಅಂತಿಮವಾಗಿರುತ್ತದೆ.

11. ಕರ್ನಾಟಕ ಸಹಕರ ಸಂಘಗಳ ನಿಯಮಗಳು 1960 ರ ನಿಯಮ 14ಎಇ ರ ಪ್ರಕಾರ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಯು ಪಡೆಯಬೇಕಾದ ಕನಿಷ್ಠ ಮತಗಳನ್ನು ಪಡೆಯದಿದ್ದಲ್ಲಿ ಆತನ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

12. ಚುನಾವಣಾ ನಿಮಿತ್ತ ರಜಾ ದಿನಗಳಂದೂ ರಿಟರ್ನಿಂಗ್ ಅಧಿಕಾರಿಗಳ ಕಾರ್ಯಾಲಯ ತೆರೆದಿರುತ್ತದೆ.

13. ಮತದಾನದ ದಿನದಂದು ಪ್ರತಿನಿಧಿಯು ಕಡ್ಡಾಯವಾಗಿ ಸಂಘದ ಡೆಲಿಗೇಟ್ ನ ಗುರುತಿನ ಚೀಟಿಯನ್ನು ಹಾಜರುಪಡಿಸತಕ್ಕದ್ದು.

ಸ್ಥಳ : ಕೋಲಾರ
ದಿನಾಂಕ : 12-05-2025

(ಡಾ:ಮೈತ್ರಿ ಹೆಚ್.ಪಿ.ಎಸ್)
ರಿಟರ್ನಿಂಗ್ ಅಧಿಕಾರಿ,
*ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ* ಹಾಗೂ ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ.